ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ

ಸಂಖ್ಯೆ:ಕವಿಹಂ:ದೂಶಿನಿ:17:ಸಂತ:22-23:2022-23 ದಿನಾಂಕ:15.09.2022

## ವಿದ್ಯಾರ್ಥಿಗಳ ನಮಗಕ್ಕೆ

ವಿಷಯ : 2020-21ನೇ ಶೈಕ್ಷಣಿಕ ಸಾಲಿನ ಸಂಪರ್ಕ ಕಾರ್ಯಕ್ರಮ ಕುರಿತು.

ಉಲ್ಲೇಖ :
1. ಯುಜಿಸಿ ಅಧಿಸೂಚನೆ ಸಂಖ್ಯೆ: F.N. 74-8/2017 (DEB-IV) ದಿ:28.07.2017
2. ದೂರಶಿಕ್ಷಣ ನಿರ್ದೇಶನಾಲಯ ನಿಯಮಾವಳಿ
3. ಶೈಕ್ಷಣಿಕ ವೇಳಾಪಟ್ಟ ಅಧಿಸೂಚನೆ ಸಂಖ್ಯೆ:ಕವಿಹಂ:ಕುಸ:ದೂಶಿನಿ:17:ಶೈವೇಅ:2022-23 ದಿ:13.06.2022
4. ದಿ:17.08.2022ರಂದು ನಡೆದ 21ನೇ ಉನ್ನತ ಸಲಹಾ ಸಮಿತಿ ಸಭೆಯ ನಿರ್ಣಯ 05
5. ದಿ:07.09.2022ರಂದು ನಡೆದ 204ನೇ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ 04
6. ಸಂಪರ್ಕ ತರಗತಿಳ ಅನುಮೋದನೆ ಕಡತದ ಕಂಡಿಕೆ:05, ದಿ:15.09.2022ರಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ

* * *

ಮೇಲಿನ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ 2020-21ನೇ ಶೈಕ್ಷಣಿಕ ಸಾಲಿನ ಸಂಪರ್ಕ ತರಗತಿಗಳನ್ನು ಉಲ್ಲೇಖ 1 ರಿಂದ 6ರವರೆಗಿನ ಅನುಮೋದನೆಯಂತೆ ಕನ್ನಡ ವಿಶ್ವವಿದ್ಯಾಲಯದ ನುಡಿ ಕಟ್ಟಡ ಹಾಗೂ ಮಾನ್ಯತೆ ಪಡೆದ ಅಧ್ಯಯನ ಕೇಂದ್ರಗಳಲ್ಲಿ ಏಕಕಾಲದಲ್ಲಿ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಸಂಪರ್ಕ ತರಗತಿ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಪಾಲ್ಗೊಂಡು, ಇದರ ಪ್ರಯೋಜನ ಪಡೆಯಲು ಸೂಚಿಸಿದೆ.

**ಸೂಚನೆ:**
☞ 2017-18 ರಿಂದ 2020-21ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮತ್ತು
☞ 2009-2010 ರಿಂದ 2016-2017ನೇ ಶೈಕ್ಷಣಿಕ ಸಾಲಿನಲ್ಲಿ ಸುವರ್ಣಾವಕಾಶ(GOLDEN CHANCE)ದಲ್ಲಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಮಾರ್ಗಸೂಚಿಯೊಂದಿಗೆ ಈ ಸೂಚನೆಗಳು ಅನ್ವಯಿಸುತ್ತದೆ.

1. ಕನ್ನಡ ವಿಶ್ವವಿದ್ಯಾಲಯದ ನುಡಿ ಕಟ್ಟಡ ಹಾಗೂ ಮಾನ್ಯತೆ ಪಡೆದ ಅಧ್ಯಯನ ಕೇಂದ್ರಗಳಲ್ಲಿ ಏಕಕಾಲದಲ್ಲಿ ಕೆಳಗಿನಂತೆ ಸಂಪರ್ಕ ತರಗತಿಗಳನ್ನು ಹಮ್ಮಿಕೊಳ್ಳಲಾಗಿದೆ.

| | |
|---|---|
| **ದಿನಾಂಕ 10.10.2022 ರಿಂದ 19.10.2022ರ ವರೆಗೆ** | **ಎಂ.ಎ. ಪ್ರಥಮ ವರ್ಷ**<br>ಕನ್ನಡ, ಚರಿತ್ರೆ, ಸಮಾಜಶಾಸ್ತ್ರ ಹಾಗೂ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ<br>**ಡಿಪ್ಲೊಮಾ ಕೋರ್ಸ್‌ಗಳು**<br>ಪುರಾತತ್ವ ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ಆಡಳಿತ ಕನ್ನಡ, ಪತ್ರಿಕೋದ್ಯಮ ಅಧ್ಯಯನ, ನಾಟಕ ಕಲೆ, ಭಾಷಾಂತರ, ಕನ್ನಡ ಸಾಹಿತ್ಯ, ಶಾಸನಶಾಸ್ತ್ರ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ |
| **ದಿನಾಂಕ 12.10.2022 ರಿಂದ 21.10.2022ರ ವರೆಗೆ** | **ಎಂ.ಎ. ಅಂತಿಮ ವರ್ಷ**<br>ಕನ್ನಡ, ಚರಿತ್ರೆ, ಸಮಾಜಶಾಸ್ತ್ರ ಹಾಗೂ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ |

2. ಸಂಪರ್ಕ ತರಗತಿಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಕೆಳಗಿನಂತೆ ದಿನಾಂಕ ನಿಗದಿಪಡಿಸಲಾಗಿದೆ.

| ವಿಷಯ | ಸಂಪರ್ಕ ತರಗತಿ |
|---|---|
| 2017-18 ರಿಂದ 2020-21ನೇ ಶೈಕ್ಷಣಿಕ ಸಾಲಿನಲ್ಲಿ ಎಂ.ಎ. ಮತ್ತು ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು | ಯಾವುದೇ ದಂಡಶುಲ್ಕವಿಲ್ಲದೆ ದಿನಾಂಕ:03.10.2022 ಕೊನೆಯ ದಿನವಾಗಿರುತ್ತದೆ. |
| 2009-2010 ರಿಂದ 2016-2017ನೇ ಶೈಕ್ಷಣಿಕ ಸಾಲಿನಲ್ಲಿ ಸುವರ್ಣಾವಕಾಶ (GOLDEN CHANCE) ಸಂಪರ್ಕ ತರಗತಿ(Contact Programs)ಗಳಿಗೆ ಹಾಜರಾಗಬಯಸುವ ವಿದ್ಯಾರ್ಥಿಗಳು | ಯಾವುದೇ ದಂಡಶುಲ್ಕವಿಲ್ಲದೆ ದಿನಾಂಕ:03.10.2022 ಕೊನೆಯ ದಿನವಾಗಿರುತ್ತದೆ. |

3. **ಗೃಹಲೇಖನ / ಸಂಪ್ರಬಬಂಧ ಇತ್ಯಾದಿ ವರದಿ ಸಲ್ಲಿಕೆ;**

- ಪ್ರಥಮ ಮತ್ತು ಅಂತಿಮ ವರ್ಷಗಳ ಎಂ.ಎ. ಕನ್ನಡ, ಚರಿತ್ರೆ ಮತ್ತು ಸಮಾಜಶಾಸ್ತ್ರ ಹಾಗೂ ಆಡಳಿತ ಕನ್ನಡ, ಕನ್ನಡ ಸಾಹಿತ್ಯ ಅಧ್ಯಯನ, ಭಾಷಾಂತರ ಅಧ್ಯಯನ ಡಿಪ್ಲೊಮಾ ಕೋರ್ಸ್‌ಗಳಿಗೆ ಗೃಹಲೇಖನ/ಸಂಪ್ರಬಂದ ಸಲ್ಲಿಸಬಹುದು.
- ಪ್ರಥಮ ಮತ್ತು ಅಂತಿಮ ವರ್ಷಗಳ ಎಂ.ಎ. ಪತ್ರಿಕೋದ್ಯಮ ಅಧ್ಯಯನ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ.) ಹಾಗೂ ಪತ್ರಿಕೋದ್ಯಮ ಅಧ್ಯಯನ, ನಾಟಕಕಲೆ, ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ, ಮಾಹಿತಿ ಸಂವಹನ ಮತ್ತು ತಂತ್ರಜ್ಞಾನ, ಶಾಸನಶಾಸ್ತ್ರ ಡಿಪ್ಲೊಮ ಕೋರ್ಸ್‌ಗಳ 5ನೇ ಪತ್ರಿಕೆಗಳು ಪೂರ್ಣ ಪ್ರಾಯೋಗಿಕವಾಗಿರುವುದರಿಂದ ಸಂಪರ್ಕ ತರಗತಿಗಳಿಗೆ ಹಾಜರಾಗಲು ಅವಕಾಶ ನೀಡುವುದು. 5ನೇ ಪತ್ರಿಕೆಗಳಿಗೆ ಗೃಹಲೇಖ ಅಥವಾ ಸಂಪ್ರಬಂಧ ಸಲ್ಲಿಸಲು ಅವಕಾಶವಿವರುವುದಿಲ್ಲ.
- ಎಂ.ಎ. ಮತ್ತು ಡಿಪ್ಲೊಮಾ ಕೋರ್ಸ್‌ಗಳ ಪತ್ರಿಕೆ 01 ರಿಂದ 04ವರೆಗೆ ಗೃಹಲೇಖನ/ಸಂಪ್ರಬಂಧ ಸಲ್ಲಿಸಬಹುದು

4. ನೋಂದಣಿ ಪಡೆದ ವಿದ್ಯಾರ್ಥಿಗಳು ಗುರುತಿನ ಚೀಟಿ(Identity Card)ಯನ್ನು ಈಗಾಗಲೇ ಕಳುಹಿಸಲಾಗಿದೆ. ಗುರುತಿನ ಚೀಟಿ ಪಡೆಯದ ವಿದ್ಯಾರ್ಥಿಗಳ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಬೇಟಿ ನೀಡಿ ಪಡೆದುಕೊಳ್ಳುವುದು.
5. ಗುರುತಿನ ಚೀಟಿಯಲ್ಲಿ ಹೆಸರು, ವಿವರಗಳು ತಿದ್ದುಪಡಿ ಇದ್ದಲ್ಲಿ, ನಿಗದಿತ ಶುಲ್ಕ ಪಾವತಿಸಿ, ಅಗತ್ಯ ದಾಖಲೆಗಳೊಂದಿಗೆ ಲಿಖಿತ ಮನವಿ ಸಲ್ಲಿಸಿ, ದೂರಶಿಕ್ಷಣ ನಿರ್ದೇಶನಾಲಯದ ಕಛೇರಿಗೆ ಬಂದು ಸರಿಪಡಿಸಿಕೊಳ್ಳುವುದು. ಆ ನಂತರದಲ್ಲಿ ಸಲ್ಲಿಸುವ ಅಹವಾಲುಗಳಿಗೆ ಸಂಬಂಧಿಸಿದ ವಿದ್ಯಾರ್ಥಿಗಳೆ ಜವಾಬ್ದಾರಾಗಿರುತ್ತಾರೆ.
6. ಶುಲ್ಕ ಪಾವತಿಸದೇ ಇರುವವರು ವಿಶ್ವವಿದ್ಯಾಲಯವು ದಿನಾಂಕ:15.09.2022ರಂದು ಹೊರಡಿಸಿರುವ ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿಯನುಸಾರ **ನಿಗದಿತ ಅವಧಿಯೊಳಗೆ** ಶುಲ್ಕ ಪಾವತಿಸಿ, ಶುಲ್ಕ ಪಾವತಿಸಿದ ರಸೀದಿಯೊಂದಿಗೆ ಪರೀಕ್ಷಾ ಅರ್ಜಿಗಳನ್ನು ತಪ್ಪದೇ ಸಲ್ಲಿಸುವುದು.
7. ನಿಯೋಜಿತ ಗೃಹಲೇಖನಗಳ ವಿಷಯಗಳನ್ನು ಈಗಾಗಲೇ ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ವೆಬ್‌ಸೈಟ್ ವಿಳಾಸ www.kannadauniversity.org. ನಿಗದಿತ ಅವಧಿಯೊಳಗೆ ಗೃಹಲೇಖನ ಸಲ್ಲಿಸುವುದು.
8. ಉಲ್ಲೇಖ 1 ರಿಂದ 06ರ ಅನ್ವಯ ಹತ್ತು ದಿನಗಳ ಸಂಪರ್ಕ ತರಗತಿಯಲ್ಲಿ ಹಾಜರಾಗುವುದು ಕಡ್ಡಾಯವಾಗಿರುತ್ತದೆ. ವಿದ್ಯಾರ್ಥಿಗಳು ಸಂಪರ್ಕ ತರಗತಿಗೆ ಹಾಜರಾದ ಬಗ್ಗೆ ಬೆಳಿಗ್ಗೆ ಮತ್ತು ಸಾಯಂಕಾಲ ಪ್ರತ್ಯೇಕ ಹಾಜರಾತಿ ಸಹಿ ಮಾಡುವುದು. ಸಹಿ ಮಾಡಿಲ್ಲವಾದರೆ ಗೈರು ಹಾಜರಿಯೆಂದು ಪರಿಗಣಿಸಲಾಗುತ್ತದೆ.
9. ಸಂಪರ್ಕ ತರಗತಿ, ಶೈಕ್ಷಣಿಕ ವೇಳಾಪಟ್ಟಿ, ಮಾರ್ಗಸೂಚಿ, ಸೂಚನೆಗಳು, ನಮೂನೆಗಳು ಮತ್ತು ಇತರೆ ಮಾಹಿತಿಗಳನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಅಧಿಕೃತ ವೆಬ್‌ಸೈಟ್ www.kannadauniversity.orgನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರಶಿಕ್ಷಣ ನಿರ್ದೇಶನಾಲಯದ ಮೊಬೈಲ್ ಸಂಖ್ಯೆ 8792219968ಗೆ ಸಂಪರ್ಕಿಸಬಹುದು.
10. ವಿದ್ಯಾರ್ಥಿಗಳ ವಾಸ್ತವ್ಯಕ್ಕಾಗಿ ವಿಶ್ವವಿದ್ಯಾಲಯವು ಯಾವುದೇ ವ್ಯವಸ್ಥೆಯನ್ನು ಕಲ್ಪಿಸುವುದಿಲ್ಲ. ತಮ್ಮ ವಸತಿ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು.
11. ಹೊಸಪೇಟೆ ಬಸ್ಸ್ ನಿಲ್ದಾಣದಿಂದ ವಿದ್ಯಾರಣ್ಯಕ್ಕೆ ಬಂದು ಹೋಗಲು ಕ.ರಾ.ರ.ಸಾ.ಸಂಸ್ಥೆಯ ಬಸ್ಸಿನ ಸೌಕರ್ಯ ಇರುತ್ತದೆ.
12. ವಿಶ್ವವಿದ್ಯಾಲಯಕ್ಕೆ ಬರುವಾಗ ಗುರುತಿನ ಚೀಟಿಯನ್ನು ತರುವುದು ಕಡ್ಡಾಯ.
13. ಹೆಚ್ಚಿನ ಮಾಹಿತಿಗಾಗಿ ದೂರಶಿಕ್ಷಣ ನಿರ್ದೇಶನಾಲಯದ ಮೊಬೈಲ್ ಸಂಖ್ಯೆ:(ಕಛೇರಿ) 8792219968 ಸಂಪರ್ಕಿಸಬಹುದು.
14. 2017-18ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಇದು ಕೊನೆಯ ಅವಕಾಶವಾಗಿರುತ್ತದೆ.

16/9/22

**ನಿರ್ದೇಶಕರು**
ದೂರಶಿಕ್ಷಣ ನಿರ್ದೇಶನಾಲಯ

ಇವರಿಗೆ,
**ಸಂಬಂಧಿಸಿದ ವಿದ್ಯಾರ್ಥಿಗಳಿಗೆ**

**ಪ್ರತಿಗಳು**
1. ಮಾನ್ಯ ಕುಲಪತಿಗಳ ಆಪ್ತಶಾಖೆ, ಕವಿಹಂ
2. ಮಾನ್ಯ ಕುಲಸಚಿವರ ಆಪ್ತಶಾಖೆ, ಕವಿಹಂ
3. ಮಾನ್ಯ ಹಣಕಾಸು ಅಧಿಕಾರಿಗಳು, ಕವಿಹಂ
4. ದೂರಶಿಕ್ಷಣ ನಿರ್ದೇಶನಾಲಯದ ವಿಸ್ತರಣಾ ಕೇಂದ್ರಗಳು
5. ದೂರಶಿಕ್ಷಣ ನಿರ್ದೇಶನಾಲಯದ ಮಾನ್ಯತಾ ಸಂಸ್ಥೆಗಳು
6. ದೂರಶಿಕ್ಷಣ ನಿರ್ದೇಶನಾಲಯದ ಸಮನ್ವಯ ಘಟಕಗಳು
7. ನಿರ್ದೇಶಕರು, ಐ.ಕ್ಯೂ.ಎ.ಸಿ. ಕವಿಹಂ
8. ಉಪ ನಿರ್ದೇಶಕರು, ಮಾಹಿತಿ ಕೇಂದ್ರ, ಕವಿಹಂ
9. ಸಹಾಯಕ ನಿರ್ದೇಶಕರು, ಗಣಕ ಕೇಂದ್ರ (ವಿ.ವಿ. ವೆಬ್‌ಸೈಟ್‌ಗೆ ಅಳವಡಿಸಲು)
10. ಕಚೇರಿ ಪ್ರತಿ